# ಕರ್ನಾಟಕ ವಿಧಾನ ಪರಿಷತ್ತು.

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ, ಶ್ರೀ ಸೂರಜ್‌ರೇವಣ್ಣ, ಶ್ರೀ ಸಿ.ಎನ್.ಮಂಜೇಗೌಡ, ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಕೆ.ಎ.ತಿಪ್ಪೇಸ್ವಾಮಿ, ಹಾಗೂ ಶ್ರೀ ಹೆಚ್.ಎಂ.ರಮೇಶಗೌಡ, ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ.**

**ಸೂಚನೆ:**

ದೇಶದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಹಾಲು ಉತ್ಪಾದಿಸುವ 2ನೇ ರಾಜ್ಯವೆಂದು ಕರ್ನಾಟಕ ಹೆಸರಾಗಿದ್ದು, ಮತ್ತು ಕರ್ನಾಟಕ ಹಾಲು ಮಹಾಮಂಡಳದ ಅಡಿಯಲ್ಲಿರುವ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟಗಳು ಸಹ ಸಹಕಾರ ಕ್ಷೇತ್ರದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಏಳಿಗೆಗೆ ಮತ್ತು ಆ ಸಂಘಗಳ ಸದಸ್ಯರ ಕ್ಷೇಮಾಭಿವೃದ್ಧಿಗೆ ಹಲವಾರು ಯೋಜನೆಗಳನ್ನು ಕೇಂದ್ರ, ರಾಜ್ಯ ಮತ್ತು ಒಕ್ಕೂಟಗಳು ತಮ್ಮದೇ ಆರ್ಥಿಕ ವ್ಯವಸ್ಥೆಯಲ್ಲಿ ಯೋಜನೆಗಳನ್ನು ರೂಪಿಸಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ನೆರೆ ರಾಜ್ಯವಾದ ಆಂಧ್ರ ಪ್ರದೇಶದ ಗಡಿ ಜಿಲ್ಲೆಗಳಿಂದ ಆಂಧ್ರ ಪ್ರದೇಶ ರಾಜ್ಯದಲ್ಲಿ ಗರ್ಭಿಣಿ, ಬಾಣಂತಿ ಮತ್ತು ಅಂಗನವಾಡಿ ಮಕ್ಕಳ ಆರೋಗ್ಯ ವೃದ್ಧಿಗೆ ಅಲ್ಲಿನ ಸರ್ಕಾರವು **'ಸಂಪೂರ್ಣ ಪೋಷಣಾ"** ಕಾರ್ಯಕ್ರಮದಡಿ ಹಾಲಿನ ಪ್ಯಾಕೇಟ್‌ಗಳನ್ನು ವಿತರಿಸುತ್ತಿದೆ. ಆದರೆ, ಈ ಹಾಲಿನ ಪ್ಯಾಕೇಟ್‌ಗಳು ಅಲ್ಲಿನ ಅಧಿಕಾರಿಗಳ ಮತ್ತು ವ್ಯಾಪಾರಿಗಳ ಶಾಮೀಲಿನೊಂದಿಗೆ ಕಾಳಸಂತೆಯಲ್ಲಿ ಕರ್ನಾಟಕ ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರು ಜಿಲ್ಲೆಯ ಹಲವು ಪ್ರದೇಶಗಳಲ್ಲಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ.

ಈ ಹಾಲಿನ ಪ್ಯಾಕೇಟ್‌ಗಳನ್ನು ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಲು ಒಕ್ಕೂಟದಲ್ಲಿ ಸಿದ್ಧಪಡಿಸಲಾಗುತ್ತಿದೆ. ಜನರ ಕಲ್ಯಾಣಕ್ಕೆ ಇರುವ ಈ ಯೋಜನೆ ಅನುಷ್ಠಾನದಲ್ಲಿ ಶಾಮೀಲು ಆಗಿರುವ ಬಗ್ಗೆ ಸೂಕ್ತ ತನಿಖೆ ಮಾಡುವುದು ಮತ್ತು ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಕುರಿತು ಅವಶ್ಯವಾಗಿದೆ. ಸಾರ್ವಜನಿಕ ಮಹತ್ವದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರುತ್ತೇವೆ.

**ಹೇಳಿಕೆ:**

ಆಂಧ್ರ-ಪ್ರದೇಶ ಡೇರಿ ಅಭಿವೃದ್ಧಿ ನಿಗಮದ ಮೂಲಕ ಆಂಧ್ರ-ಪ್ರದೇಶ ರಾಜ್ಯದ ಅಂಗನವಾಡಿ ಮಕ್ಕಳಿಗೆ ಉಚಿತ ಹಾಲು ವಿತರಣೆ ಯೋಜನೆಗೆ 2016-17 ರಿಂದ ಜಿಲ್ಲಾ ಹಾಲು ಒಕ್ಕೂಟಗಳಿಂದ ಮಾಹೆಯಾನ 15 ಲಕ್ಷ ಲೀಟರುಗಳಷ್ಟು ಫ್ಲೆಕ್ಸಿ ಹಾಲನ್ನು ಕರ್ನಾಟಕ ಹಾಲು ಮಹಾಮಂಡಳದ ಮೂಲಕ/ನೇತೃತ್ವದಲ್ಲಿ ಸರಬರಾಜು ಮಾಡಲಾಗಿದೆ. ನಂತರದಲ್ಲಿ, ಜನವರಿ-2020 ರಿಂದ ಮಾಹೆಯಾನ 55.94 ಲಕ್ಷ ಲೀಟರುಗಳಷ್ಟು ಯು.ಹೆಚ್.ಟಿ.ಟೆಟ್ರಾಪ್ಯಾಕ್ ಹಾಗೂ ಫ್ಲೆಕ್ಸಿ ಹಾಲನ್ನು ಸರಬರಾಜು ಮಾಡಲಾಗಿದ್ದು, ದಿನಾಂಕ:22.06.2020 ರಿಂದ ಆಂಧ್ರ ಪ್ರದೇಶ ರಾಜ್ಯ ಸರ್ಕಾರವು **"ಸಂಪೂರ್ಣ ಪೋಷಣಾ"** ಯೋಜನೆಯನ್ನು ವಿಸ್ತರಿಸಿ,

ಅಂಗನವಾಡಿ ಮಕ್ಕಳಿಗೆ, ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಪೌಷ್ಠಿಕತೆಯನ್ನು ವೃದ್ಧಿಸಲು ಉಚಿತವಾಗಿ ನೀಡಲು ಅಗತ್ಯವಿರುವ ಮಾಹೆಯಾನ 110 ಲಕ್ಷ ಲೀಟರುಗಳಷ್ಟು ಯು.ಹೆಚ್.ಟಿ.ಟೆಟ್ರಾಪ್ಯಾಕ್ ಹಾಗೂ ಫ್ಲೆಕ್ಸಿ ಹಾಲನ್ನು ಸರಬರಾಜು ಮಾಡಲು ಕೋರಿದ್ದು, ಅದರಂತೆ ಕರ್ನಾಟಕ ಹಾಲು ಮಹಾಮಂಡಳದ ಜಿಲ್ಲಾ ಹಾಲು ಒಕ್ಕೂಟಗಳು ಮೇಲಿನ ಪ್ರಮಾಣದ ಹಾಲನ್ನು ಆಂಧ್ರ-ಪ್ರದೇಶ ಡೇರಿ ಅಭಿವೃದ್ಧಿ ನಿಗಮವು ಮಾಹೆಯಾನ ನೀಡುವ ಸಿ.ಡಿ.ಪಿ.ಓ. ವಾರು ಷೆಡ್ಯೂಲ್‌ನಂತೆ ಸರಬರಾಜು ಮಾಡುತ್ತಿದ್ದು, ಸದರಿ ಯೋಜನೆಗೆ, ಅಧಿಕೃತ ಸಾಗಾಣಿಕಾದಾರರ ಮೂಲಕವೇ ಹಾಲನ್ನು ಸಾಗಾಣಿಕೆ ಮಾಡುತ್ತಿದೆ. ಫಲಾನುಭವಿಗಳಿಗೆ ಯಾವುದೇ ಅಡೆಚಣೆಯಾಗದಂತೆ ಸೂಕ್ತ ಸಮಯದಲ್ಲಿ ಹಾಲಿನ ಪೊಟ್ಟಣಗಳು ದೊರೆಯುವಂತೆ ಮಾಡುವ ಗುರಿಯೊಂದಿಗೆ ಕರ್ನಾಟಕ ಹಾಲು ಮಹಾಮಂಡಳ ಹಾಗೂ ಆಂಧ್ರ-ಪ್ರದೇಶ ಡೇರಿ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಹೊಸ ತಂತ್ರಾಂಶವನ್ನು ರೂಪಿಸಿ, ಅಳವಡಿಸಲಾಗಿದ್ದು, ಸದರಿ ತಂತ್ರಾಂಶದಲ್ಲಿ ಹಾಲಿನ ಪೊಟ್ಟಣಗಳು ಲೋಡಿಂಗ್ ಪ್ರಾರಂಭದ ಹಂತದಲ್ಲಿ ಪೊಟ್ಟಣಗಳ ಬ್ಯಾಚ್ ಸಂಖ್ಯೆ, ಉತ್ಪಾದನೆಯಾದ ದಿನಾಂಕವನ್ನು ಒಳಗೊಂಡಂತೆ ಸಿ.ಡಿ.ಪಿ.ಓ ಗೆ ಇನ್ವಾಯ್ಸ್‌ಅನ್ನು ಮಾಡಿ ಸಂಬಂಧಪಟ್ಟ ಸಿ.ಡಿ.ಪಿ.ಓ. ಗೆ ಸರಬರಾಜು ಮಾಡಲಾಗುತ್ತಿರುತ್ತದೆ. ಸರಬರಾಜಿನ ನಂತರ ಎಲ್ಲಾ ಹಂತಗಳಲ್ಲೂ ಇವುಗಳನ್ನು ತಂತ್ರಾಂಶದ ನಿರ್ವಹಣೆದಾರರು ಮೇಲ್ವಿಚಾರಣೆ ವಹಿಸಿ ಅಂತಿಮವಾಗಿ ಅಂಗನವಾಡಿ ಕೇಂದ್ರಗಳಿಗೆ ತಲುಪಿದ ನಂತರಅಲ್ಲಿನ ಸಿಬ್ಬಂದಿ ಬಯೋಮೆಟ್ರಿಕ್ ಮೂಲಕ ಹಾಲನ್ನು ಸ್ವೀಕರಿಸುವುದರೊಂದಿಗೆ ಕೊನೆಗೊಳ್ಳುತ್ತದೆ. ಹಾಲು ಒಕ್ಕೂಟದಿಂದ ಯಾವ ಸಿ.ಡಿ.ಪಿ.ಓ. ಗೆ ಇನ್ವಾಯ್ಸ್ ಆಗಿರುತ್ತದೆಯೋ ಅದೇ ಸಿ.ಡಿ.ಪಿ.ಓ. ನಲ್ಲಿಯೇ ಹಾಲು ಅನ್‌ಲೋಡ್ ಆಗುತ್ತದೆಯೇ ವಿನಃ ಬೇರೆ ಸಿ.ಡಿ.ಪಿ.ಓ.ಗೆ ಅನ್‌ಲೋಡ್ ಮಾಡಲು ಅವಕಾಶವಿರುವುದಿಲ್ಲ.

ಕಾಳಸಂತೆಯಲ್ಲಿ ಆಂಧ್ರದ ಹಾಲು ಮಾರಾಟದ ಬಗ್ಗೆ ಮಾಹಿತಿ ಪಡೆದ ತುಮಕೂರಿನ ಎಫ್.ಎಸ್.ಎಸ್.ಎ.ಐ. (Food Safety Standards Authority of India) ಇಲಾಖೆಯು, ತುಮಕೂರು ನಗರದ ಪೊಲೀಸರ ಸಹಾಯದೊಂದಿಗೆ ದಾಳಿ ನಡೆಸಿ, ಕಾಳಸಂತೆಯಲ್ಲಿ ಮಾರಾಟವಾಗಲಿದ್ದ 280 ಲೀಟರ್ ಹಾಲಿನ ಪ್ಯಾಕ್‌ಗಳನ್ನು ವಶಪಡಿಸಿಕೊಂಡಿದ್ದು, ಪ್ರಕರಣವನ್ನು ತುಮಕೂರು ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ಮಾಡಲಾಗಿದ್ದು, ತನಿಖೆ ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ಹಾಲು ಮಹಾಮಂಡಳದಿಂದ **"ಸಂಪೂರ್ಣ ಪೋಷಣಾ"** ಯೋಜನೆ ದುರುಪಯೋಗವಾಗದಂತೆ, ಆಂದ್ರ ಪ್ರದೇಶ ಡೇರಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರುರವರಿಗೆ ದಿನಾಂಕ:24.2.2022ರಂದು ಅಗತ್ಯ ಕ್ರಮ ಕೈಗೊಳ್ಳಲು ಮನವಿ ಮಾಡಲಾಗಿದ್ದು, ಆಂದ್ರ ಪ್ರದೇಶದ ಗಡಿಭಾಗದಲ್ಲಿ ಯೋಜನೆಯಡಿಯ ಹಾಲು ಕಾಳಸಂತೆಯಲ್ಲಿ ಮಾರಾಟವಾಗದಂತೆ ಕಟ್ಟೆಚ್ಚರ ವಹಿಸಲಾಗುತ್ತಿದೆ.

**ಇ-ಪಸಂಮೀ 78 ಸಲೆವಿ 2022**

ಪ್ರಭು ಬಿ. ಚವ್ಹಾಣ್

**ಪಶುಸಂಗೋಪನೆ ಸಚಿವರು,**